

ಸುಶೀಲ್‌ಕುಮಾರ್



ರಾಹುಲ್ ಅವ್ವಾಸಾಹೇಬ್ ಅವಾರೆ



ವಿನೇಶಾ

ಫಿಟ್‌ನೆಸ್ ಬಗ್ಗೆ ಇನ್ನೂ ಅನುಮಾನಗಳಿವೆ. ಭಾರತ ಕುಸ್ತಿ ಫೆಡರೇಷನ್ ಈ ಬಗ್ಗೆ ಸ್ಪಷ್ಟವಾಗಿ ಏನೂ ಹೇಳುತ್ತಿಲ್ಲ.. ಒಂದೊಮ್ಮೆ ಅವರು ಫಿಟ್ ಆಗದಿದ್ದರೆ ಬೇರೆಯವರನ್ನು ಕಳಿಸಲು ಸಮಯವೂ ಇಲ್ಲ. ಇದರಿಂದಾಗಿ ಪುರುಷರ 74 ಕೆ.ಜಿ. ವಿಭಾಗದಲ್ಲಿ ಭಾರತದ ಪ್ರತಿನಿಧಿಯೇ ಇಲ್ಲದಂತಾಗುತ್ತದೆ. ಅದರೊಂದಿಗೆ ಒಂದು ಪದಕ ಗೆಲ್ಲುವ ಅವಕಾಶವೂ ಕೈತಪ್ಪುತ್ತದೆ. ದೇಶದ ಕುಸ್ತಿ ಕ್ರೀಡೆಯ ಬೆಳವಣಿಗೆಯ ದೃಷ್ಟಿಯಿಂದ ಇದು ಒಳ್ಳೆಯದಲ್ಲ. ಆದ್ದರಿಂದ ಸುಶೀಲ್ ಗುಣಮುಖರಾಗಿ ಪದಕ ತರುವಂತಾಗಲಿ ಎಂದು ಅಭಿಮಾನಿಗಳು ಹಾರೈಸುತ್ತಿದ್ದಾರೆ. ಅಲ್ಲದೇ ಸುಶೀಲ್‌ಗೆ ಅವರಿಗೆ ಇದು ಕೊನೆಯ ಕಾಮನ್‌ವೆಲ್ತ್ ಕೂಟವೂ ಆಗಲಿದೆ.

## ಬಜರಂಗ್ ಭರವಸೆ

ಪುರುಷರ ಫ್ರೀಸ್ಟೈಲ್ ವಿಭಾಗದಲ್ಲಿ ಸುಶೀಲ್ ಬಿಟ್ಟರೆ 24 ವರ್ಷದ ಬಜರಂಗ್ ಪೂನಿಯಾ ಮೇಲೆ ಎಲ್ಲರ ನಿರೀಕ್ಷೆ ಹೆಚ್ಚಿದೆ. ಹರಿಯಾಣದ 22 ವರ್ಷದ ಕುಸ್ತಿಪಟು ಬಜರಂಗ್ ತಾವು ಕಣಕ್ಕಿಳಿದ ಎಲ್ಲ ಟೂರ್ನಿಗಳಲ್ಲಿಯೂ ಪದಕ ಹೊತ್ತು ಬರುತ್ತಾರೆ. 2017ರಲ್ಲಿ ದೆಹಲಿಯಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಇತ್ತೀಚೆಗೆ ಬಿಷ್ಕೇಕ್‌ನಲ್ಲಿ ನಡೆದಿದ್ದ ಏಷ್ಯನ್ ಟೂರ್ನಿಯಲ್ಲಿ ಕಂಚು, ಹೋದ ವರ್ಷಬ್ರಾಕ್‌ಪನ್ ಕಾಮನ್‌ವೆಲ್ತ್ ಕುಸ್ತಿಯಲ್ಲಿ ಚಿನ್ನ, ಏಷ್ಯನ್ ಮಾರ್ಷಲ್ ಆರ್ಟ್ಸ್ ಮತ್ತು ಕುಸ್ತಿಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. 2014ರ ಗ್ಲಾಸ್ಗೋ ಕೂಟದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಇದೀಗ 65 ಕೆ.ಜಿ. ವಿಭಾಗದಲ್ಲಿ ತೊಡೆ ತಟ್ಟಲು ಸಿದ್ಧರಾಗಿದ್ದಾರೆ. ನಿವೃತ್ತಿಯ ಅಂಚಿನಲ್ಲಿರುವ ಸುಶೀಲ್, ಯೋಗೇಶ್ವರ್ ಅವರ ನಂತರ ಒಲಿಂಪಿಕ್ಸ್‌ನಲ್ಲಿ ಪದಕದ ಭರವಸೆ ಮೂಡಿಸಿರುವ ಕುಸ್ತಿಪಟು ಬಜರಂಗ್.

26 ವರ್ಷದ ರಾಹುಲ್ ಅಪ್ಪಾಸಾಹೇಬ್ ಅವಾರೆ (57 ಕೆಜಿ) ಅವರ ಮೇಲೆ ನಿರೀಕ್ಷೆ ಇದೆ. 2011ರಲ್ಲಿ ಕಾಮನ್‌ವೆಲ್ತ್ ಕುಸ್ತಿ ಚಾಂಪಿಯನ್‌ಷಿಪ್ ನಲ್ಲಿ ಚಿನ್ನ ಗೆದ್ದ ನಂತರ ದೊಡ್ಡ ಸಾಧನೆ ಮಾಡಿಲ್ಲ. ಮಹಾರಾಷ್ಟ್ರದ ಕುಸ್ತಿಪಟುವಿಗೆ ಇದೊಂದು ಉತ್ತಮ ಅವಕಾಶ. 97 ಕೆ.ಜಿ. ವಿಭಾಗದಲ್ಲಿ ಈಚೆಗೆ ಕಾಮನ್‌ವೆಲ್ತ್ ಕುಸ್ತಿಯಲ್ಲಿ ಬೆಳ್ಳಿ ಪದಕ ಜಯಿಸಿದ್ದ ಮೌಸಮ್ ಖತ್ರಿ ಅವರಿಗೆ ಈ ಬಾರಿ ಮತ್ತೆ ಮಿಂಚುವ ಅವಕಾಶ ಇದೆ ಆದರೆ ಅವರು ಪೋಲೆಂಡ್, ಕೊರಿಯಾ ಮತ್ತು ಆಸ್ಟ್ರೇಲಿಯಾ ಕುಸ್ತಿಪಟುಗಳ ಸವಾಲನ್ನು ಮೆಟ್ಟಿ ನಿಲ್ಲಬೇಕು. ಹೆವಿವೇಟ್ ವಿಭಾಗದಲ್ಲಿ ದೇಶಕ್ಕೆ ಮೊದಲ ಪದಕ ಜಯಿಸಿಕೊಡುವ ಅವಕಾಶ ಅವರಿಗೆ ಇದೆ. 27 ವರ್ಷದ ಮೌಸಮ್ ಮುಂಬರಲಿರುವ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುತ್ತಿದ್ದಾರೆ. ಇಲ್ಲಿ ಪದಕ ಗೆದ್ದರೆ ಅವರ ಹಾದಿ ಸುಗಮವಾಗಲಿದೆ. ತಂಡದಲ್ಲಿರುವ ಸೋಮವೀರ್ (86 ಕೆ.ಜಿ) ಮತ್ತು ಸುಮಿತ್ (125 ಕೆಜಿ) ಅವರಿಗೆ ಪದಕ ಗೆದ್ದು ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳುವ ಸವಾಲು ಇದೆ.

## ಪೋಗಟ್ ಪರಂಪರೆಯ ಕೊಂಡಿಗಳು

ಭಾರತದಿಂದ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಭಾಗವಹಿಸಿದ ಖ್ಯಾತಿ ಗೀತಾ ಪೋಗಟ್ ಅವರದ್ದು. ಕಾಮನ್‌ವೆಲ್ತ್ ಕೂಟದ ಇತಿಹಾಸದಲ್ಲಿ ಮೊದಲ ಚಿನ್ನದ ಪದಕ ಗೆದ್ದ ಶ್ರೇಯವೂ ಅವರದ್ದು. ಆದರೆ ಈ ಬಾರಿ ಅವರು ಕಣಕ್ಕೆ ಇಳಿಯುತ್ತಿಲ್ಲ. ಅವರ ಸಹೋದರಿಯರಾದ ಬಬಿತಾಕುಮಾರಿ ಮತ್ತು ವಿನೇಶಾ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. 2014ರ ಗ್ಲಾಸ್ಗೋದಲ್ಲಿ ಚಿನ್ನದ ಪದಕ ಗದ್ದಿದ್ದ ಬಬಿತಾ ಕುಮಾರಿ ನಂತರದ ಅವಧಿಯಲ್ಲಿ ಫಿಟ್‌ನೆಸ್ ಸಮಸ್ಯೆಯಿಂದ ಕಣದಿಂದ ಹೊರಗುಳಿದಿದ್ದೇ ಹೆಚ್ಚು. ಈ ಕೂಟದಲ್ಲಿ ಮಾಡುವ ಸಾಧನೆ ಅವರ ಭವಿಷ್ಯದ ದಿಕ್ಕನ್ನು ನಿರ್ಧರಿಸುವುದು ಖಚಿತ.

ವಿನೇಶಾ ಪೋಗಟ್ ಪದಕ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದಾರೆ ಈಚೆಗೆ ನಡೆದಿದ್ದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 50 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ. ಇಡೀ ಟೂರ್ನಿಯಲ್ಲಿ ಕಠಿಣ ಹಾದಿಯಲ್ಲಿ ಹೋರಾಟ ನಡೆಸಿದ್ದ ವಿನೇಶಾ ಫೈನಲ್ ತಲುಪಿದ್ದರು. ಗಾಯದಿಂದ ಚೇತರಿಸಿಕೊಂಡ ನಂತರ ಭಾಗವಹಿಸಿರುವ ಎರಡೂ ಏಷ್ಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಪದಕ ಜಯಿಸಿರುವುದು ಅವರ ಹೆಗ್ಗಳಿಕೆ. ಸುಮಾರು ಎಂಟೂವರೆ ತಿಂಗಳು ಕಾಲ ವಿಶ್ರಾಂತಿ ಪಡೆದಿದ್ದ ಅವರು ಹೋದ ವರ್ಷ ದೆಹಲಿಯಲ್ಲಿ ನಡೆದಿದ್ದ ಏಷ್ಯನ್ ಟೂರ್ನಿಯಲ್ಲಿ ಕಂಚು ಗೆದ್ದಿದ್ದರು. ಆದರೆ ಈ ಬಾರಿ ಕಿರ್ಗಿಸ್ತಾನದಲ್ಲಿ ಫೈನಲ್‌ನಲ್ಲಿ ಕೂದಲೆಳೆಯ ಅಂತರದಲ್ಲಿ ಚಿನ್ನದ ಪದಕ ಗೆಲ್ಲುವುದನ್ನು ತಪ್ಪಿಸಿಕೊಂಡಿದ್ದರು. ಚೀನಾದ ಚನ್ ಲೀ ಅವರು 3–2ರಿಂದ ವಿನೇಶಾ ವಿರುದ್ಧ ಪ್ರಯಾಸದ ಜಯ ಗಳಿಸಿದ್ದರು. 2014ರಲ್ಲಿ ಗ್ಲಾಸ್ಗೊದಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಅವರು ಚಿನ್ನದ ಪದಕ ಗೆದ್ದಿದ್ದರು.

## ಸಾಕ್ಷಿ ಮೇಲೆ ಕಣ್ಣು

ಒಲಿಂಪಿಕ್ಸ್ ಇತಿಹಾಸದಲ್ಲಿ ಮಹಿಳೆಯರ ಕುಸ್ತಿಯಲ್ಲಿ ಪದಕ ಗೆದ್ದ ಮೊದಲ ಮಹಿಳಾ ಕುಸ್ತಿಪಟು ಸಾಕ್ಷಿ ಮಲಿಕ್ ಅವರು ಲಯಕ್ಕೆ ಮರಳಲು ಗೋಲ್ಡ್ ಕೋಸ್ಟ್ ವೇದಿಕೆಯಾಗಲಿದೆ. ಇತ್ತೀಚೆಗೆ ಬಿಷ್ಕೇಕ್‌ನಲ್ಲಿ ನಡೆದಿದ್ದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 62 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದರು. ಅದರೊಂದಿಗೆ 2018ನೇ ವರ್ಷದ ಶುಭಾರಂಭ ಮಾಡಿದ್ದರು. 2017ರಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕುಸ್ತಿಯಲ್ಲಿ ಚಿನ್ನ, ಅದಕ್ಕೂ ಮುನ್ನ ದೆಹಲಿಯಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿಪದಕ ಗೆದ್ದಿದ್ದರು. ಇದೀಗ 62 ಕೆ.ಜಿ. ವಿಭಾಗದಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಅವರು ಪದಕದೊಂದಿಗೆ ಮರಳುವ ನಿರೀಕ್ಷೆ ಅಪಾರವಾಗಿದೆ. ದಿವ್ಯಾ ಕಾಕರನ್ (67 ಕೆಜಿ), ಕಿರಣ್ (76 ಕೆ.ಜಿ), ಪೂಜಾ ದಂಡಾ (67 ಕೆಜಿ) ಕೂಡ ತಂಡದಲ್ಲಿದ್ದಾರೆ. ಇಲ್ಲಿ ಪದಕ ಜಯಿಸಿದರೆ ಕುಸ್ತಿ ಕ್ಷಿತಿಜದ ಹೊಸ ತಾರೆಗಳಾಗಿ ಬೆಳಗುವ ಅವಕಾಶ ಅವರಿಗೆ ಇದೆ.